# ಶ್ರೀಧನ್ವಂತರಿ ಸ್ತೋತ್ರ ಸುಳಾದಿ

ರಾಗ–ಹಿಂದೋಳ ಧ್ರುವತಾಳ

ಆಯುವೃದ್ಧಿಯಾಗೋದು ಶ್ರೇಯಸ್ಸು ಬರುವುದು ।
ಕಾಯಾ ನಿರ್ಮಲಿನಾ ಕಾರಣವಾಹದೋ ।
ಮಾಯಾ ಹಿಂದಾಗುವದು ನಾನಾ ರೋಗದ ಬೀಜ ।
ಬೇಯಿಸಿ ಕಳೆವದು ವೇಗದಿಂದ ।
ನಾಯಿ ಮೊದಲಾದ ಕುತ್ಸಿತ ದೇಹ ನಿ ।
ಕಾಯವಾ ತೆತ್ತು ದುಷ್ಕರ್ಮದಿಂದ ।
ಕ್ರೀಯಮಾಣ ಸಂಚಿತ ಭರಿತವಾಗಿದ್ದ ದುಃಖ ।
ಹೇಯ ಸಾಗರದೊಳು ಬಿದ್ದು ಬಳಲೀ ।
ನೋಯಿಸಿಕೊಂಡು ನೆಲೆಗಾಣದೆ ಒಮ್ಮೆ ತನ್ನ ।
ಬಾಯಲಿ ವೈದ್ಯಮೂರ್ತಿ ಶ್ರೀಧನ್ವಂತ್ರಿ ।
ರಾಯಾ ರಜೌಷಧಿ ನಿಯಾಮಕ ಕರ್ತ ।
ಶ್ರೀಯರಸನೆಂದು ತುತಿಸಲಾಗಿ ।
ತಾಯಿ ಒದಗಿ ಬಂದು ಬಾಲನ್ನ ಸಾಕಿದಂತೆ ।
ನೋಯಗೊಡದೆ ನಮ್ಮನ್ನು ಪಾಲಿಪಾ ।
ಧ್ಯೇಯಾ ದೇವಾದಿಗಳಿಗೆ ಧರ್ಮಜ್ಞ ಗುಣಸಾಂದ್ರ ।
ಶ್ರೇಯಸ್ಸು ಕೊಡುವನು ಭಜಕರಿಗೆ ।
ಮಾಯಾ ಮಂತ್ರದಿಂದ ಜಗವೆಲ್ಲ ವ್ಯಾಪಿಸಿ ।
ಸನ್ಯಾಯವಂತನಾಗಿ ಚೇಷ್ಟೆ ಮಾಳ್ಪಾ ।
ವಾಯುವಂದಿತ ನಿತ್ಯ ವಿಜಯ ವಿಠ್ಠಲರೇಯಾ ।
ಪ್ರೀಯನು ಕಾಣೋ ನಮಗೆ ಅನಾದಿ ರೋಗ ಕಳೆವಾ ॥೧॥

–ಮಟ್ಟತಾಳ–

ಧನ್ವಂತ್ರಿ ಶ್ರೀಧನ್ವಂತ್ರಿ ಎಂದು ।
ಸನ್ನುತಿಸಿ ಸತತ ಭಿನ್ನ ಜ್ಞಾನದಿಂದ ।
ನಿನ್ನವ ನಿನ್ನವನೋ ಘನ್ನತಿಯಲಿ ನೆನೆವ ।
ಮನ್ನುಜ ಭುವನದೊಳು ಧನ್ಯನು ಧನ್ಯ ನೆನ್ನಿ ।

ಚೆನ್ನಮೂರುತಿ ಸುಪ್ರಸನ್ನ ವಿಜಯ ವಿಠ್ಠಲನ್ನ ।
ಸತ್ಯವೆಂದು ಬಣ್ಣಿಸು ಬಹು ವಿಧದಿ ॥೨॥

—ತ್ರಿವಿಡಿತಾಳ—

ಶಶಿಕುಲೋದ್ಭವ ದೀರ್ಘತಮ ನಂದನದೇವಾ ।
ಶಶಿವರ್ಣ ಪ್ರಕಾಶ ಪ್ರಭುವೆ ವಿಭುವೆ ।
ಶಶಿಮಂಡಲ ಸಂಸ್ಥಿತ ಕಲಶ ಕಲಶಪಾಣಿ ।
ಬಿಸಜಲೋಚನ ಅಶ್ವಿನೇಯ ವಂದ್ಯಾ ।
ಶಶಿಗರ್ಭ ಭೂರುಹ ಲತೆ ಪೊದೆ ತಾಪ ಓ ।
ಡಿಸುವೌಷಧಿ ಶ್ರೀತುಲಸಿ ಜನಕ ।
ಅಸುರ ನಿರ್ಜರ ತತಿನೆರೆದು ಗಿರಿಯ ತಂದು ।
ಮಿಸುಕದಲೆ ಮಹೋದಧಿ ಮರ್ದಿಸಲಾಗಿ ।
ನಸುನಗುತ ಪುಟ್ಟಿದೆ ಪೀಯೂಷ ಘಟ ಧರಿಸಿ ।
ಅಸಮ ದೈವನೆ ನಿನ್ನ ಮಹಿಮೆಗೆ ನಮೋ ನಮೋ ।
ಬಿಸಜ ಸಂಭವ ರುದ್ರ ಮೊದಲಾದ ದೇವತಾ ।
ಋಷಿನಿಕರ ನಿನ್ನ ಕೊಂಡಾಡುವರೊ ।
ದಶದಿಶದೊಳು ಮೆರೆವ ವಿಜಯ ವಿಠ್ಠಲಭಿಷ್ಕಾ ।
ಅಸು ಇಂದ್ರಿಯಂಗಳ ರೋಗ ನಿವಾರಣ ॥೩॥

—ಅಟ್ಟತಾಳ—

ಶರಣು ಶರಣು ಧನ್ವಂತರಿ ತಮೋಗುಣನಾಶಾ ।
ಶರಣು ಆರ್ತಜನ ಪರಿಪಾಲಕ ದೇವ ।
ತರುವೆ ಭವ ತಾಪಹರಣ ದಿತಿಸುತ ।
ಹರಣ ಮೊಹಕ ಲೀಲಾ ಪರಮಪೂರ್ಣ ಬ್ರಹ್ಮ ।
ಬ್ರಹ್ಮ ಉದ್ಧಾರಕ ಉರುಪರಾಕ್ರಮ ।
ಉರುಪರಾಕ್ರಮ ಉರಗಶಾಯಿ ।
ವರಕಿರೀಟ ಮಹಾಮಣಿ ಕುಂಡಲಕರ್ಣ ।
ಮಿರುಗುವ ಹಸ್ತ ಕಂಕಣ ಹಾರಪದಕ ತಾಂ ।

ಬರ ಕಾಂಚಿ ಪೇತಾಂಬರ ಚರಣಭೂಷಾ ।
ಸಿರಿವತ್ಸಲಾಂಚ್ಛನ ವಿಜಯ ವಿಠ್ಠಲರೇಯಾ ।
ತರುಣಗಾತರ ಜ್ಞಾನ ಮುದ್ರಾಂಕಿತ ಹಸ್ತಾ ॥೪॥

–ಆದಿತಾಳ–

ಏಳುವಾಗಲಿ ಮತ್ತೆ ತಿರುಗಿ ತಿರುಗುತಲಿ ।
ಬೀಳುವಾಗಲಿ ನಿಂತು ಕುಳಿತಿರುವಾಗಲಿ ।
ಹೇಳುವಾಗಲಿ ಮಾತು ಕೇಳುವಾಗಲಿ ಕರೆದು ।
ಪೇಳುವಾಗಲಿ ಪೋಗಿ ಸತ್ಕರ್ಮ ಮಾಡುವಾಗ ।
ಬಾಳುವಾಗಲಿ ಭೋಜನ ನಾನಾ ಷಡ್ರಸ ಸಂ ।
ಮ್ಮೇಳವಾಗಿ ಮೇಲು ಪುತ್ರಾದಿ ಒಡೆಯೊಡನೆ ।
ಖೇಳವಾಗಿ ಮನುಜ ಮರ್ಯಾದೆ ನಿನ್ನಯ ।
ನಾಲಿಗೆ ಕೊನೆಯಲ್ಲಿ ಧನ್ವಂತರಿ ಎಂದು ಒಮ್ಮೆ ।
ಕಾಲ ಅಕಾಲದಲ್ಲಿ ಸ್ಮರಿಸಿದರೆ ಅವಗೆ ।
ವೇಳ್ಯ ವೇಳ್ಯಗೆ ಬಾಹ ಭವಬೀಜ ಪರಿಹಾರ ।
ನೀಲಮೇಘಶ್ಯಾಮ ವಿಜಯ ವಿಠ್ಠಲರೇಯಾ ।
ವಾಲಗ ಕೊಡುವನು ಮೊಕ್ತರ ಸಂಗದಲ್ಲಿ ॥೫॥

–ಜತೆ–

ಧಂ ಧನ್ವಂತರಿ ಎಂದು ಪ್ರಣವಪೂರ್ವಕದಿಂದ ।
ವಂದಿಸಿ ನೆನೆಯಲು ವಿಜಯ ವಿಠ್ಠಲ ವೊಲಿವಾ ॥೬॥

www.YouSigma.com